ಪ್ರಿಯಾಂಕಾ ಉಪೇಂದ್ರ ಮುಖ್ಯಭೂಮಿಕೆಯಲ್ಲಿ ನಟಿಸಿರುವ 'ಹೌರಾ ಬ್ರಿಡ್ಜ್' ಸಿನಿಮಾ ಜೂನ್ ಅಂತ್ಯಕ್ಕೆ ತೆರೆಗೆ ಬರಲು ಸಜ್ಜಾಗುತ್ತಿದೆ. ನಿರ್ದೇಶಕ ಲೋಹಿತ್ ಎಚ್., ಸಿನಿಮಾ ಕುರಿತು ನೀಡಿದ ವಿಶೇಷ ಮಾಹಿತಿ ಇಲ್ಲಿದೆ.

■ ಪದ್ಮನಾಭ ಭಟ್




# ಥ್ರಿಲ್ಲಿಂಗ್ ಬ್ರಿಡ್ಜ್...

'ಇದು ನಿನ್ನ ವಯಸ್ಸಿಗೆ ಮಾಡುವ ಸಿನಿಮಾ ಅಲ್ಲವೇ ಅಲ್ಲ. ನಿನ್ನ ವಯಸ್ಸನ್ನು ಮೀರಿದ ಪ್ರಬುದ್ಧತೆ ಈ ಸಿನಿಮಾದಲ್ಲಿ ಕಾಣ್ತಿದೆ. ದೊಡ್ಡ ನಿರ್ದೇಶಕರು ಯೋಚಿಸುವ ರೀತಿ ಯೋಚಿಸುವ ಪ್ರತಿಭೆ ನಿಂಗೆ ಸಿದ್ಧಿಸಿದೆ'



ಲೋಹಿತ್

'ಹೌರಾ ಬ್ರಿಡ್ಜ್' ಸಿನಿಮಾದ ಮೊದಲಪ್ರತಿ ನೋಡಿದ ನಟ ಉಪೇಂದ್ರ ಹೀಗೆ ಹೇಳಿದಾಗ ಎದುರಿಗೆ ಕೂತಿದ್ದ ಲೋಹಿತ್ ಮುಖದಲ್ಲಿ ನಿರಾಳಭಾವ ಕಾಣಿಸಿಕೊಂಡಿತು. ಎರಡೂವರೆ ವರ್ಷಗಳ ಸತತ ಶ್ರಮ ಸಾರ್ಥಕವಾದ ಧನ್ಯತೆಯಲ್ಲಿ ಅವರು ನಕ್ಕಾಗ ಕಣ್ಣುಗಳಲ್ಲಿ ಹೊಳಪಿತ್ತು.

2016ರ ಕೊನೆಯಲ್ಲಿ 'ಮಮ್ಮಿ' ಮೂಲಕ ಪ್ರೇಕ್ಷಕರನ್ನು ಬೆಚ್ಚಿಬೀಳಿಸಿದ್ದಷ್ಟೇ ಅಲ್ಲದೆ ಚಿತ್ರರಂಗವೇ ಒಮ್ಮೆ ತನ್ನತ್ತ ತಿರುಗಿ ನೋಡುವಂತೆ ಮಾಡಿದ ಹುಡುಗನಿಗೆ ಆಗಿನ್ನೂ 23ರ ಚಿಗುರುಮೀಸೆ. ದೆವ್ವದ ಕಥೆಯ ಮೂಲಕ ನಡುಕ ಹುಟ್ಟಿಸಿದ್ದ ಲೋಹಿತ್ ಈಗ ಮತ್ತೆ 'ಹೌರಾ ಬ್ರಿಡ್ಜ್' ಮೂಲಕ ಥ್ರಿಲ್ಲರ್ ಕಥೆಯೊಂದನ್ನು ಹೇಳಲು ಸಜ್ಜಾಗಿದ್ದಾರೆ. ಮೊದಲ ಸಿನಿಮಾದಲ್ಲಿ ಗಳಿಸಿಕೊಂಡಿರುವ ಮೆಚ್ಚುಗೆ ಮತ್ತು ನಿರೀಕ್ಷೆ ಎರಡನ್ನೂ ಈ ಚಿತ್ರದಲ್ಲಿ ಇಮ್ಮಡಿಗೊಳಿಸಿಕೊಳ್ಳುವ ವಿಶ್ವಾಸದಲ್ಲಿ ಅವರಿದ್ದಾರೆ.

'ಹೌರಾ ಬ್ರಿಡ್ಜ್' ಸತ್ಯಘಟನೆಯೊಂದನ್ನು ಆಧರಿಸಿ ರೂಪಿಸಿದ ಸಿನಿಮಾ. ವಿಶೇಷವೆಂದರೆ ಮೊದಲಿನಿಂದ ಕೊನೆಯವರೆಗೂ ಈ ಚಿತ್ರವನ್ನು ಕೋಲ್ಕತ್ತದಲ್ಲಿಯೇ ಚಿತ್ರೀಕರಣ ಮಾಡಲಾಗಿದೆ. ಪ್ರಿಯಾಂಕಾ ಉಪೇಂದ್ರ, ಮಗಳು ಐಶ್ವರ್ಯಾ, ಕಿಶೋರ್ ಮುಖ್ಯಭೂಮಿಕೆಯಲ್ಲಿರುವುದೂ ಈ ಚಿತ್ರದ ವಿಶೇಷಗಳೇ.

'ಒಂದು ಕ್ಷಣವೂ ಅತ್ತಿತ್ತ ಲಕ್ಷ್ಯ ಹೋಗದ ಹಾಗೆ ಥ್ರಿಲ್ ಕೊಡುವುದರ ಜತೆಗೆ ಭಾವನಾತ್ಮಕ ಸನ್ನಿವೇಶಗಳ ಮೂಲಕವೂ ಮನಸೊಳಗೆ ಅಚ್ಚೊತ್ತುವಂಥ ಸಿನಿಮಾ ಇದು' ಎನ್ನುತ್ತಾರೆ ಲೋಹಿತ್.

ಮೊದಲ ಸಿನಿಮಾದಿಂದ ಎರಡನೇ ಸಿನಿಮಾಗೆ ಎರಡೂವರೆ ವರ್ಷದ ಅಂತರ ತುಸು ಜಾಸ್ತಿಯಾಯಿತಲ್ಲವೇ ಎಂದು ಕೇಳಿದರೆ ಅದಕ್ಕೆ ಕಾರಣಗಳ ಪಟ್ಟಿಯನ್ನೇ ಕೊಡುತ್ತಾರೆ. 'ಇಡೀ ಚಿತ್ರವನ್ನು ಕೋಲ್ಕತ್ತದಲ್ಲಿ ಚಿತ್ರೀಕರಣ ಮಾಡಬೇಕಿತ್ತು. ಒಂದೇ ಷೆಡ್ಯೂಲ್‌ನಲ್ಲಿ ಚಿತ್ರೀಕರಣ ಮುಗಿಸಲು ಯೋಜಿಸಿದ್ದೆವು. ಆದರೆ ಮೊದಲ ಷೆಡ್ಯೂಲ್ ಕೊನೆಯ ಕೆಲವು ದಿನಗಳು ಮಳೆ ಬಂದು ತೊಂದರೆಯಾಯ್ತು. ನಂತರ ಕಿಶೋರ್ ಅವರ ಡೇಟ್ ಸಮಸ್ಯೆಯಾಯ್ತು. ಐಶ್ವರ್ಯಾಗೆ ಕೂಡ ಸ್ಕೂಲ್ ರಜಾ ಇರುವುದನ್ನು ನೋಡಿಕೊಂಡು ಚಿತ್ರೀಕರಣ ಮಾಡಬೇಕಾಯ್ತು. ಅಷ್ಟೇ ಅಲ್ಲ, 'ಮಮ್ಮಿ' ಸಿನಿಮಾದಲ್ಲಿ ಧ್ವನಿವಿನ್ಯಾಸವನ್ನು ತುಂಬ ಜನರು ಇಷ್ಟಪಟ್ಟಿದ್ದರು. ಈ ಚಿತ್ರದಲ್ಲಿಯೂ ಅಷ್ಟೇ ಒಳ್ಳೆಯ ಗುಣಮಟ್ಟದ ಧ್ವನಿವಿನ್ಯಾಸ ಮಾಡುವ ಸವಾಲು ನನ್ನ ಮೇಲಿತ್ತು. ಇಡೀ ಚಿತ್ರವನ್ನು ಲೈವ್ ಲೊಕೇಶನ್‌ನಲ್ಲಿ ಚಿತ್ರೀಕರಣ ಮಾಡಿದ್ದೇವೆ. ರೀರೆಕಾರ್ಡಿಂಗ್ ಕೂಡ ಕೋಲ್ಕತ್ತದಲ್ಲಿಯೇ ಮಾಡಲು ನಿರ್ಧರಿಸಿದೆವು. ಯಾಕೆಂದರೆ ಧ್ವನಿವಿನ್ಯಾಸದಲ್ಲಿಯೂ ಅಲ್ಲಿನ ಪರಿಸರವನ್ನು ಕಟ್ಟಿಕೊಡುವುದು ನನ್ನ ಉದ್ದೇಶ. ಧ್ವನಿವಿನ್ಯಾಸಕ್ಕೇ ಆರು ತಿಂಗಳು ತೆಗೆದುಕೊಂಡಿದ್ದೇವೆ' ಎಂದು ತಡವಾಗಲು ಕಾರಣವನ್ನು ನೀಡುತ್ತಾರೆ.

ಈ ಸಿನಿಮಾದ ಶೇ 15ರಿಂದ 20ರಷ್ಟು ಸಂಭಾಷಣೆಗಳು ಬೆಂಗಾಲಿ ಭಾಷೆಯಲ್ಲಿಯೇ ಇವೆಯಂತೆ. 'ಹಾಗಂತ ಅರ್ಥವಾಗದೇ ಇರುವಂಥ ಸಂಭಾಷಣೆಗಳು ಯಾವುದೂ ಇಲ್ಲ. ದೃಶ್ಯಗಳ ಮೂಲಕವೇ ಸಂಭಾಷಣೆಗಳೂ ಅರ್ಥವಾಗುತ್ತವೆ. ಆ ಕಥೆಗೆ ಅಷ್ಟು ಬೆಂಗಾಲಿ ಭಾಷೆ ಬಳಸಿಕೊಳ್ಳುವುದು ಅಗತ್ಯವಾಗಿತ್ತು. ಆ ಸಂಭಾಷಣೆಗಳನ್ನು ಅಲ್ಲಿನ 'ಇಎನ್‌ಎಡಿ' ರಂಗತಂಡದ ಸುಮಾರು ಇಪ್ಪತ್ತೈದರಿಂದ ಮೂವತ್ತು ಕಲಾವಿದರನ್ನು ಕರೆಸಿ ಡಬ್ಬಿಂಗ್ ಮಾಡಿಸಿರುವುದು ವಿಶೇಷ. ಈ ಚಿತ್ರದಲ್ಲಿ ಬಂಗಾಳದ ಸಾಕಷ್ಟು ರಂಗಭೂಮಿ ಕಲಾವಿದರು ನಟಿಸಿದ್ದಾರಂತೆ.

ಜೂನ್ ಅಂತ್ಯಕ್ಕೆ ಚಿತ್ರವನ್ನು ತೆರೆಗೆ ತರಲು ಲೋಹಿತ್ ಸಿದ್ಧತೆ ನಡೆಸಿದ್ದಾರೆ. ಕನ್ನಡ ಮತ್ತು ತಮಿಳು ಎರಡೂ ಭಾಷೆಗಳಲ್ಲಿ ಏಕಕಾಲಕ್ಕೆ ಚಿತ್ರೀಕರಣಗೊಂಡಿರುವ ಈ ಸಿನಿಮಾದ ತೆಲುಗು ರಿಮೇಕ್ ಹಕ್ಕುಗಳಿಗೂ ಈಗಲೇ ಬೇಡಿಕೆ ಬಂದಿದೆಯಂತೆ.

'ಇಲ್ಲಿಯವರೆಗೆ ಎಲ್ಲವೂ ಪಾಸಿಟಿವ್ ಆಗಿಯೇ ಇದೆ. ಚಿತ್ರ ಬಿಡುಗಡೆಯ ನಂತರ ಜನರ ಪ್ರತಿಕ್ರಿಯೆಯೂ ಹಾಗೆಯೇ ಇರುತ್ತದೆ ಎಂಬ ನಂಬಿಕೆಯಲ್ಲಿದ್ದೇನೆ' ಎಂದು ಚಿಗುರುಮೀಸೆಯಲ್ಲಿಯೇ ನಸುನಗುತ್ತಾರೆ ಲೋಹಿತ್.

■